ದಿನಾಂಕ 24-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು - ಪ್ರತಿವಾದಿ ಪರ ಎಎಸ್ ಬಿ ವಕೀಲರಿಂದಃ**

ನಾನು ಎಲ್ಲಾ ವಾದಿಯರ ಪರವಾಗಿ ಸಾಕ್ಷ್ಯ ನುಡಿಯುತಿದ್ದೇನೆ . ವಿವಿಧ ವಾದಿಯರು ನನಗೆ ಸಾಕ್ಷ್ಯ ನುಡಿಯಲು ಜಿಪಿಎ ಕೊಟ್ಟಿರುತ್ತಾರೆ. ಅದನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ನನ್ನ ವಕೀಲರಿಗೆ ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಉಳಿದ ವಾದಿಯರು ನನಗೆ ನ್ಯಾಯಲಯದಲ್ಲಿ ಸಾಕ್ಷ್ಯ ನುಡಿಯಲು ಜಿಪಿಎಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ಇದಿನಾ ಬ್ಯಾರಿಯನ್ನು ನೋಡಿಲ್ಲ. ಇದಿನಾ ಬ್ಯಾರಿ ದಾವಾಸ್ವತ್ತಿಗೆ ಯಾವ ರೀತಿ ಸ್ವಾಧೀನಕ್ಕೆ ಬಂದು ಎಂದು ನನಗೆ ಗೊತ್ತಿಲ್ಲ ಕಾರಣ ಆಗ ನಾನು ಹುಟ್ಟಿರಲಿಲ್ಲ . ಆತ 1950 ರಲ್ಲಿ ದಾವಾಸ್ವತ್ತುವಿನ ಸ್ವಾಧೀನಕ್ಕೆ ಬಂದಿರುತ್ತಾನೆ ಎಂದು ನಾನು ಅಂದಾಜಿನ ಮೇಲೆ ಇಸವಿಯನ್ನು ಹೇಳುತಿದ್ದೇನೆ . ಇದಿನಾ ಬ್ಯಾರಿ ನನ್ನ ಅಜ್ಜಿಗೆ ಮನೆಯ ಕೆಲಸದಲ್ಲಿ ಸಹಾಯ ಮಾಡುತಿದ್ದ ಆ ರೀತಿ ಯಾಗಿ ಆತ ಸ್ವಾಧೀನಕ್ಕೆ ಬಂದಿರಬಹುದು . ನನ್ನ ಅಜ್ಜಿಗೆ ಬಹಳಷ್ಟು ಕೃಷಿ ಭೂಮಿ ಇತ್ತು . ಆತ ಕೃಷಿ ಕೆಲಸದಲ್ಲಿ ನನ್ನ ಅಜ್ಜಿಗೆ ಸಹಾಯ ಮಾಡುತಿರಲಿಲ್ಲ. ಇದಿನಾ ಬ್ಯಾರಿ ನಮಗೆ ಯಾವುದೇ ಬಾಡಿಗೆ ಕೊಡುತ್ತಿರಲಿಲ್ಲ ಆತ ಉಚಿತವಾಗಿ ಸ್ವಾಧೀನಕ್ಕೆ ಬಂದಿದ್ದ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

ಒ.ಎಸ್.- 82/2025
ಪಿ.ಡಬ್ಲ್ಯು- 01

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.